# ಕನ್ನಡ ವಿಶ್ವವಿದ್ಯಾಲಯ,ಹಂಪಿ

ವಿದ್ಯಾರಣ್ಯ–೫೮೩ ೨೭೬

## ನವೆಂಬರ್ ೨೭, ೨೦೧೫ರ ಶುಕ್ರವಾರದಂದು ನಡೆದ ಕಾರ್ಯಕಾರಿ ಸಮಿತಿಯ ೧೮೦ನೇ ಸಭೆಯ ನಡೆವಳಿಗಳು

**ಸಭೆಯಲ್ಲಿ ಉಪಸ್ಥಿತರಿದ್ದವರು:**

| | |
|---|---|
| ೦೧. ಡಾ. ಮಲ್ಲಿಕಾ. ಎಸ್. ಘಂಟಿ, ಮಾನ್ಯ ಕುಲಪತಿಗಳು, ಕ.ವಿ.ಹಂ. | : ಅಧ್ಯಕ್ಷರು |
| ೦೨. ಡಾ. ಎ. ಮೋಹನ ಕುಂಟಾರ್, ಡೀನ್, ಭಾಷಾ ನಿಕಾಯ, ಕ.ವಿ.ಹಂ. | : ಸದಸ್ಯರು |
| ೦೩. ಡಾ. ಕೆ.ಎಂ. ಮೇತ್ರಿ, ಡೀನ್, ಸಮಾಜವಿಜ್ಞಾನಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೦೪. ಡಾ. ಹನುಮಣ್ಣ ನಾಯಕ ದೊರೆ, ಡೀನ್, ಲಲಿತಕಲೆಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೦೫. ಡಾ. ಪಿ. ಮಹಾದೇವಯ್ಯ, ಹಣಕಾಸು ಅಧಿಕಾರಿಗಳು, ಕ.ವಿ.ಹಂ. | : ವಿಶೇಷ ಆಹ್ವಾನಿತರು |
| ೦೬. ಡಾ. ಡಿ. ಪಾಂಡುರಂಗಬಾಬು, ಕುಲಸಚಿವರು, ಕ.ವಿ.ಹಂ. | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು | : ಸದಸ್ಯರು |
| ೦೫. ನಿರ್ದೇಶಕರು, ರಾಜ್ಯ ಪುರಾತತ್ವ ವಸ್ತುಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |

ಸಭೆಯ ಆರಂಭದಲ್ಲಿ ಮಾನ್ಯ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ನಂತರ ಮಂಡಿಸಲಾದ ಕಾರ್ಯಸೂಚಿಯನ್ನು ಕುರಿತು ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**ದಿನಾಂಕ ೦೬.೦೮.೨೦೧೫ ರಂದು ನಡೆದ ಕಾರ್ಯಕಾರಿ ಸಮಿತಿಯ ೧೭೮ನೇ ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು.**

**ನಿರ್ಣಯ:** ಮಂಡಿಸಲಾದ ನಡೆವಳಿಗಳನ್ನು ಪರಿಶೀಲಿಸಿ ನಿರ್ಣಯಗಳನ್ನು ಅನುಮೋದಿಸಲಾಯಿತು.

**ದಿನಾಂಕ ೦೬.೦೮.೨೦೧೫ ರಂದು ನಡೆದ ಕಾರ್ಯಕಾರಿ ಸಮಿತಿಯ ೧೭೮ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು.**

**ನಿರ್ಣಯ:** ಮಂಡಿಸಲಾದ ನಡೆವಳಿಗಳ ಅನುಪಾಲನಾ ವರದಿಯನ್ನು ಪರಿಶೀಲಿಸಿ ನಿರ್ಣಯಗಳನ್ನು ಅನುಮೋದಿಸಲಾಯಿತು.

**ದಿನಾಂಕ ೦೯.೧೦.೨೦೧೫ ರಂದು ನಡೆದ ಕಾರ್ಯಕಾರಿ ಸಮಿತಿಯ ೧೭೯ನೇ ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು.**

**ನಿರ್ಣಯ:** ಮಂಡಿಸಲಾದ ನಡೆವಳಿಗಳನ್ನು ಸ್ಥಿರೀಕರಿಸಿ ನಿರ್ಣಯಗಳನ್ನು ಅನುಮೋದಿಸಲಾಯಿತು.

**ದಿನಾಂಕ ೦೯.೧೦.೨೦೧೫ ರಂದು ನಡೆದ ಕಾರ್ಯಕಾರಿ ಸಮಿತಿಯ ೧೭೯ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು.**

**ನಿರ್ಣಯ:** ಮಂಡಿಸಲಾದ ನಡೆವಳಿಗಳ ಅನುಪಾಲನಾ ವರದಿಯನ್ನು ಸ್ಥಿರೀಕರಿಸಿ ನಿರ್ಣಯಗಳನ್ನು ಅನುಮೋದಿಸಲಾಯಿತು.

**೧೮೦.೦೧. ದಿನಾಂಕ ೨೪.೦೭.೨೦೧೫ರಂದು ನಡೆದ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ಸಲಹಾ ಸಮಿತಿ ಸಭೆಯ ನಡೆವಳಿಗಳಿಗೆ ಸ್ಥಿರೀಕರಣ ಕೋರಿದೆ.**

**ನಿರ್ಣಯ:** ಸ್ಥಿರೀಕರಿಸಿದೆ.

**೧೮೦.೦೨. ದಿನಾಂಕ ೨೮.೦೯.೨೦೧೫ರಂದು ನಡೆದ ಡೀನ್ ಸಮಿತಿ ಸಭೆಯ ನಡೆವಳಿಗಳ ಸ್ಥಿರೀಕರಣಕ್ಕೆ ಅನುಮದೋನೆ ಕೋರಿದೆ.**

**ನಿರ್ಣಯ:** ಅನುಮೋದಿಸಿದೆ.

೧೮೦.೦೩. **ದಿನಾಂಕ ೦೬.೧೦.೨೦೧೫ರಂದು ನಡೆದ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ಡಿಪ್ಲೋಮಾ ಕೋರ್ಸ್ ಹಾಗೂ ಬಿವಿಎ ಪದವಿ ತರಗತಿಯ ಅಧ್ಯಯನ ಮಂಡಳಿ ಸಭೆಯ ನಡೆವಳಿಗಳಿಗೆ ಸ್ಥಿರೀಕರಣಕ್ಕೆ ಅನುಮೋದನೆ ಕೋರಿದೆ.**

ನಿರ್ಣಯ: ಅನುಮೋದಿಸಿದೆ.

೧೮೦.೦೪. **ದಿನಾಂಕ ೦೭.೧೦.೨೦೧೫ರಂದು ನಡೆದ ಕನ್ನಡ ವಿಶ್ವವಿದ್ಯಾಲಯದ ೨೦೧೫-೧೬ನೇ ಸಾಲಿನ ಏಪ್ರಿಲ್ ೨೦೧೫ ರಿಂದ ಜೂನ್ ೨೦೧೫ರ ವರೆಗಿನ ೧ನೇ ತ್ರೈಮಾಸಿಕ ಅವಧಿಯ ಹಣಕಾಸು ಸಮಿತಿ ಸಭೆಯ ನಡೆವಳಿಗಳಿಗೆ ಸ್ಥಿರೀಕರಣಕ್ಕೆ ಅನುಮೋದನೆ ಕೋರಿದೆ.**

ನಿರ್ಣಯ: ಅನುಮೋದಿಸಿದೆ.

೧೮೦.೦೫. **ದಿನಾಂಕ ೧೯.೧೦.೨೦೧೫ರಂದು ನಡೆದ ದೂರಶಿಕ್ಷಣ ನಿರ್ದೇಶನಾಲಯದ ಉನ್ನತ ಸಲಹಾ ಮಂಡಳಿ ಸಭೆಯ ನಡೆವಳಿಗಳಿಗೆ ಸ್ಥಿರೀಕರಣಕ್ಕೆ ಅನುಮೋದನೆ ಕೋರಿದೆ.**

ನಿರ್ಣಯ: ಅನುಮೋದಿಸಿದೆ.

೧೮೦.೦೬. **ದಿನಾಂಕ ೨೯.೧೦.೨೦೧೫ರಂದು ನಡೆದ ಗ್ರಂಥಾಲಯ ತಾತ್ಕಾಲಿಕ ವೃತ್ತಿಪರ ಹುದ್ದೆಗಳ ಆಯ್ಕೆ ಸಮಿತಿ ಸಭೆಯ ನಡೆವಳಿಗಳಿಗೆ ಸ್ಥಿರೀಕರಣಕ್ಕೆ ಅನುಮೋದನೆ ಕೋರಿದೆ.**

ನಿರ್ಣಯ: ಅನುಮೋದಿಸಿದೆ.

೧೮೦.೦೭. **ಕನ್ನಡ ವಿಶ್ವವಿದ್ಯಾಲಯದ ಇದುವರೆಗಿನ ನಡೆ ಮತ್ತು ಮುಂದೆ ಸಾಗಬೇಕಾದ ಹಾದಿಯ ಕುರಿತು ನಾಡಿನ ಹಿರಿಯ ಮತ್ತು ಕಿರಿಯ ಬರಹಗಾರರು, ಚಿಂತಕರು, ಮಾಧ್ಯಮ ಮತ್ತು ಇತರೆ ಕ್ಷೇತ್ರಗಳ ಸಾಹಿತಿಗಳೊಂದಿಗೆ ಸಂವಾದ ಏರ್ಪಡಿಸುವ ಕುರಿತು ದಿನಾಂಕ ೨೯.೧೦.೨೦೧೫ರಂದು ನಡೆದ ನಿಕಾಯಗಳ ಡೀನರು ಮತ್ತು ಅಧ್ಯಯನ ವಿಭಾಗಗಳ ಮುಖ್ಯಸ್ಥರ ಸಭೆಯ ನಡೆವಳಿಗಳಿಗೆ ಸ್ಥಿರೀಕರಣಕ್ಕೆ ಅನುಮೋದನೆ ಕೋರಿದೆ.**

ನಿರ್ಣಯ: ಅನುಮೋದಿಸಿದೆ.

೧೮೦.೦೮. **ನಾಡೋಜ ಡಾ. ರಾಜಕುಮಾರ್ ಅಧ್ಯಯನ ಕೇಂದ್ರಕ್ಕೆ ಬೆಂಗಳೂರಿನಲ್ಲಿ ಸ್ಥಳಾವಕಾಶ ಪಡೆಯಲು ಮತ್ತು ಕನ್ನಡ ವಿಶ್ವವಿದ್ಯಾಲಯವು ಸರ್ಕಾರದೊಂದಿಗೆ ಕಚೇರಿ ವ್ಯವಹಾರಗಳಿಗಾಗಿ ಅಧಿಕಾರಿಯನ್ನು ನಿಯೋಜಿಸುವ ಕುರಿತು.**

ನಿರ್ಣಯ: ಬೆಂಗಳೂರಿನಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ನಾಡೋಜ ಡಾ. ರಾಜಕುಮಾರ್ ಅಧ್ಯಯನ ಕೇಂದ್ರದ ಕಾರ್ಯಚಟುವಟಿಕೆಗಳನ್ನು ನಡೆಸಲು ವಾರದಲ್ಲಿ ಮೂರು ದಿನ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುವಂತೆ ಡಾ. ಅಶೋಕಕುಮಾರ ರಂಜೇರೆ, ಪ್ರಾಧ್ಯಾಪಕರು ಅವರನ್ನು ಸದರಿ ಕೇಂದ್ರದ ವಿಶೇಷ ಅಧಿಕಾರಿಯನ್ನಾಗಿ ನಿಯೋಜಿಸಲು ಹಾಗೂ ಸದ್ಯ ಬೆಂಗಳೂರು ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಈ ಕೆಲಸಕಾರ್ಯಗಳಿಗೆ ಬಳಸಿಕೊಳ್ಳಲು ಸಭೆಯು ಅನುಮೋದಿಸಿತು.

ಮಾನ್ಯ ಕುಲಪತಿಗಳು ಹಾಗೂ ಮಾನ್ಯ ಕುಲಸಚಿವರು ನಿಯೋಜಿಸುವ ಹಾಗೂ ಶಾಸನಬದ್ದ ಅಧಿಕಾರಿಗಳಿಗೆ/ವಿಶೇಷ ಅಧಿಕಾರಿಗಳಿಗೆ ನಿಜವೆಚ್ಚ (ವಸತಿ, ಕಚೇರಿ ಹಾಗೂ ಔಪಚಾರಿಕ ವೆಚ್ಚ)ಗಳನ್ನು ಭರಿಸಲು ಸಭೆಯು ಅನುಮೋದಿಸಿತು.

೧೮೦.೦೯. **ಕುಂದುಕೊರತೆ, ಐಕ್ಯೂಎಸಿ, ನ್ಯಾಕ್ ಸಮಿತಿ ರಚನೆ ಕುರಿತು.**

ನಿರ್ಣಯ: ನೂತನವಾಗಿ ರಚಿಸಲಾಗಿರುವ ನೌಕರರ ಕುಂದುಕೊರತೆ ಹಾಗೂ ಐಕ್ಯೂಎಸಿ, 'ನ್ಯಾಕ್' ಮಾನ್ಯತೆ ಸಿದ್ಧತಾ ಸಮಿತಿಗಳಿಗೆ ಸಭೆಯು ಅನುಮೋದನೆ ನೀಡಿತು.

೧೮೦.೧೦. **ಮಹಿಳೆಯರ ಮೇಲಿನ ದೌರ್ಜನ್ಯ ತಡೆ ಸಮಿತಿ ರಚನೆ ಕುರಿತು.**

ನಿರ್ಣಯ: ಮಹಿಳೆಯರ ಮೇಲಿನ ದೌರ್ಜನ್ಯ ತಡೆ ಸಮಿತಿಗೆ ಅಧ್ಯಕ್ಷರನ್ನೊಳಗೊಂಡಂತೆ ಎಲ್ಲಾ ಸದಸ್ಯರು ನೀಡಿರುವ ರಾಜೀನಾಮೆಯನ್ನು ಸಭೆಯು ಪರಿಶೀಲಿಸಿ ರಾಜೀನಾಮೆಯನ್ನು ಅಂಗೀಕರಿಸಿತು. ಹಾಗೂ ಹೊಸದಾಗಿ ಈ ಕೆಳಗಿನಂತೆ ಅಧ್ಯಕ್ಷರು/ಸದಸ್ಯರನ್ನು ಸೂಚಿಸಿ ಸಮಿತಿ ರಚಿಸಲು ಮಾನ್ಯ ಕುಲಪತಿಯವರಿಗೆ ಒಪ್ಪಿಸಲಾಯಿತು.

೧. ಡಾ. ಸಿದ್ಧಗಂಗಮ್ಮ, ಸಹ ಪ್ರಾಧ್ಯಾಪಕರು-ಅಧ್ಯಕ್ಷರು

೨. ಒಬ್ಬ ಕಾನೂನು ಸಲಹೆಗಾರರು-ಸದಸ್ಯರು

೩. ಡಾ. ಎಂ. ಉಷಾ, ಪ್ರಾಧ್ಯಾಪಕರು-ಸದಸ್ಯರು

೪. ಶ್ರೀಮತಿ ದಿಲ್‌ಶಾದ್‌ಬಾನು ಖಾಜಿ, ಹಿರಿಯ ಸಹಾಯಕರು- ಸದಸ್ಯರು

೫. ಡಾ. ಚಲುವರಾಜು, ಪ್ರಾಧ್ಯಾಪಕರು - ಸದಸ್ಯರು

೧೮೦.೧೧. **ನುಡಿಹಬ್ಬ ೨೪ ಮತ್ತು ಘಟಿಕೋತ್ಸವ ಸಿದ್ಧತೆ ಕುರಿತು.**

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರ ದಿನಾಂಕವನ್ನು ನಿರೀಕ್ಷಿಸಿ ನುಡಿಹಬ್ಬ ೨೪ ಮತ್ತು ಘಟಿಕೋತ್ಸವವನ್ನು ಜನವರಿ ೨೦೧೬ರಲ್ಲಿ ಎರಡು ದಿನ ಕಾರ್ಯಕ್ರಮವನ್ನು ನಡೆಸಲು ಹಾಗೂ ಈ ಕುರಿತಂತೆ ಪೂರ್ವಸಿದ್ಧತಾ ಸಮಿತಿಗಳನ್ನು ರಚಿಸಲು ಅನುಮೋದನೆಯನ್ನು ನೀಡಿತು.

**೧೮೦.೧೨. ಸದ್ಯದಲ್ಲಿಯೇ ಕನ್ನಡ ವಿಶ್ವವಿದ್ಯಾಲಯಕ್ಕೆ ೨೫ ವರ್ಷಗಳು ಪೂರ್ಣಗೊಳ್ಳುವ ಹಿನ್ನೆಲೆಯಲ್ಲಿ ಬೆಳ್ಳಿ ಹಬ್ಬದ ಆಚರಣೆ ಕುರಿತು.**

**ನಿರ್ಣಯ:** ನಾಡಿನ ಹಿರಿ, ಕಿರಿಯ ವಿದ್ವಾಂಸರ ಜತೆ ನಡೆಸಲಿರುವ ಕನ್ನಡ ವಿಶ್ವವಿದ್ಯಾಲಯದ ಇದುವರೆಗಿನ ನಡೆ, ವರ್ತಮಾನ ಭವಿಷ್ಯದ ಸಂವಾದ ಕಾರ್ಯಕ್ರಮದ ನಂತರ ಕ್ರವಹಿಸಲು ಕುಲಪತಿಯವರ ವಿವೇಚನೆಗೆ ಬಿಡಲಾಯಿತು.

**೧೮೦.೧೩. ಯುಜಿಸಿಗೆ ಸಂಬಂಧಿಸಿದ ಕೆಲಸಕಾರ್ಯಗಳು ಹಾಗೂ ವಿದ್ಯಾರ್ಥಿವೇತನಗಳಿಗೆ ಸಂಬಂಧಿಸಿದ ದೆಹಲಿಯ ಕೆಲಸ ಕಾರ್ಯಗಳ ನಿರ್ವಹಣೆಗಾಗಿ ಶ್ರೀ ರಾಜಶೇಖರ ಸವಣೂರು ಇವರನ್ನು ನಿಯೋಜಿಸುವ ಕುರಿತು.**

**ನಿರ್ಣಯ:** ವಿಶ್ವವಿದ್ಯಾಲಯದ ಯುಜಿಸಿ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ಹಾಗೂ ವಿದ್ಯಾರ್ಥಿ ವೇತನಗಳಿಗೆ ಸಂಬಂಧಿಸಿದ ದೆಹಲಿಯ ಕೆಲಸ ಕಾರ್ಯಗಳ ನಿರ್ವಹಣೆಗಾಗಿ ಡಿಸೆಂಬರ್ ೦೧, ೨೦೧೫ರಿಂದ ಜಾರಿಗೆ ಬರುವಂತೆ ಆರು ತಿಂಗಳ ಅವಧಿಗೆ ಶ್ರೀ ರಾಜಶೇಖರ ಸವಣೂರು ಇವರನ್ನು ನಿಯೋಜಿಸಲು ಹಾಗೂ ಮಾಸಿಕ ರೂ. ೧೨,೦೦೦/- ಗೌರವ ಸಂಭಾವನೆಯನ್ನು ನೀಡಲು ಸಭೆಯು ಅನುಮೋದಿಸಿತು.

**೧೮೦.೧೪. ೨೦೧೪-೧೫ನೇ ಸಾಲಿನ ವಾರ್ಷಿಕ ವರದಿ ಪರಿಶೀಲನೆ ಹಾಗೂ ಸರ್ಕಾರಕ್ಕೆ ಸಲ್ಲಿಸುವ ಬಗ್ಗೆ.**

**ನಿರ್ಣಯ:** ೨೦೧೪-೧೫ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯು ಪರಿಶೀಲಿಸಿ, ಪ್ರಸಾರಾಂಗದ ಈ ಹಿಂದಿನ ಟೆಂಡರ್ ದರದಲ್ಲಿಯೇ ಮುದ್ರಿಸಿ ಸರ್ಕಾರಕ್ಕೆ ಸಲ್ಲಿಸಲು ಸಮಿತಿಯು ಅನುಮೋದಿಸಿತು.

**೧೮೦.೧೫. ಅಕ್ಷರ ಗ್ರಂಥಾಲಯ ಕಾರ್ಯನಿರ್ವಹಣೆ ಅವಧಿ ವಿಸ್ತರಣೆ ಕುರಿತು.**

**ನಿರ್ಣಯ:** ಅಕ್ಷರ ಗ್ರಂಥಾಲಯವು ಬೆಳಿಗ್ಗೆ ೮.೦೦ ಗಂಟೆಯಿಂದ ೧೦.೦೦ ಗಂಟೆಯವರೆಗೆ, ಸಂಜೆ ೫.೩೦ರಿಂದ ರಾತ್ರಿ ೮.೦೦ ಗಂಟೆಯವರೆಗೆ ಹೆಚ್ಚುವರಿ ಕಾರ್ಯನಿರ್ವಹಿಸುತ್ತಿರುವುದನ್ನು ಸಭೆಯು ಅನುಮೋದಿಸಿತು.

**೧೮೦.೧೬. ವಿಶ್ವವಿದ್ಯಾಲಯಕ್ಕೆ ವೈದ್ಯರ ನಿಯೋಜನೆ ಕುರಿತು.**

**ನಿರ್ಣಯ:** ವಿಶ್ವವಿದ್ಯಾಲಯಕ್ಕೆ ಆರು ತಿಂಗಳ ಅವಧಿಗೆ ಒಬ್ಬ ವೈದ್ಯರು ಮತ್ತು ಒಬ್ಬ ನರ್ಸ್ ಇವರುಗಳನ್ನು ನಿಯೋಜಿಸಿಕೊಳ್ಳಲು ಮಾನ್ಯ ಕುಲಪತಿಗಳ ವಿವೇಚನೆಗೆ ಒಪ್ಪಿಸಲಾಯಿತು. ಹಾಗೂ ಸರ್ಕಾರವು ನಿಗದಿಪಡಿಸಿರುವ ಸಂಭಾವನೆಯನ್ನು ನೀಡಲು ಸಭೆಯು ಅನುಮತಿ ನೀಡಿತು.

ಜಿಲ್ಲಾ/ತಾಲೂಕು ವೈದ್ಯಾಧಿಕಾರಿಗಳಿಗೆ ಪತ್ರ ಬರೆದು ಅಲ್ಲಿಂದ ಮಾಹಿತಿ ಪಡೆದು ವೇತನ, ಪರಿಕರಗಳು ಹಾಗೂ ಇತರೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸಭೆಯು ಅನುಮತಿಸಿತು.

**೧೮೦.೧೭. ವೈದ್ಯಕೀಯ ವೆಚ್ಚಗಳ ಪರಿಶೀಲನಾ ಸಮಿತಿ ಪುನರ್‌ರಚನೆ ಕುರಿತು ಹಾಗೂ ಡಾ. ಹನುಮಣ್ಣನಾಯಕ ದೊರೆ ಮತ್ತು ಶ್ರೀ ಬಿ.ವಿ. ಕೃಷ್ಣಕುಮಾರ್ ಅವರುಗಳ ವೈದ್ಯಕೀಯ ವೆಚ್ಚಗಳ ಮರುಪಾವತಿ ಕುರಿತು.**

**ನಿರ್ಣಯ:** ಇನ್‌ಶೂರೆನ್ಸ್ ಮೂಲಕ ವೈದ್ಯಕೀಯ ಬಿಲ್ಲು ಪಾವತಿಗೆ ಕ್ರಮವಹಿಸಬಹುದಾದ ನಿಯಮಗಳನ್ನು ಹೊಸದಾಗಿ ರೂಪಿಸಿಕೊಳ್ಳಲು ಸೂಚಿಸಿ ಅಲ್ಲಿಯವರೆಗೆ ಈ ಹಿಂದಿನ ಯಥಾಸ್ಥಿತಿಯಂತೆ ಪಾವತಿಗೆ ಕ್ರಮವಹಿಸಲು ಸಭೆಯು ಅನುಮೋದಿಸಿತು.

ಡಾ. ಹನುಮಣ್ಣನಾಯಕ ದೊರೆ, ಪ್ರಾಧ್ಯಾಪಕರು ಇವರ ವೈದ್ಯಕೀಯ ವೆಚ್ಚದ ಒಟ್ಟು ಮೊತ್ತ ರೂ.೫೫,೮೩೫/-ಗಳು ಹಾಗೂ ಶ್ರೀ ಬಿ.ವಿ. ಕೃಷ್ಣಕುಮಾರ್ ಇವರ ವೈದ್ಯಕೀಯ ವೆಚ್ಚದ ಒಟ್ಟು ಮೊತ್ತ ರೂ. ೫೧,೧೨೭/-ಗಳು. ಈ ಇಬ್ಬರು ಸಿಬ್ಬಂದಿಗಳಿಗೆ ನಿಜ ವೆಚ್ಚ ಪಾವತಿಸಲು ಹಾಗೂ ನಿಯಮಾನುಸಾರ ಈ ಹಿಂದಿನಂತೆಯೇ ತಾಲೂಕು/ಜಿಲ್ಲಾ ವೈದ್ಯಾಧಿಕಾರಿಗಳ ದೃಢೀಕರಣದೊಂದಿಗೆ ಪಾವತಿಗೆ ಕ್ರಮವಹಿಸಲು ಸಭೆಯು ನಿರ್ಣಯಿಸಿತು.

**೧೮೦.೧೮. ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಬಗ್ಗೆ.**

**ನಿರ್ಣಯ:** ಈಗಾಗಲೇ ಸಿದ್ಧಪಡಿಸಿರುವ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಪರಿಶೀಲಿಸಿದ ಸಭೆಯು ಈ ಕುರಿತಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ತಜ್ಞರಾದ ಶ್ರೀ ಬಿ.ಎಸ್. ನಾಗರಾಜ ಅಥವಾ ಶ್ರೀ ಸಂಗಮೇಶ ಅವರುಗಳಿಂದ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಪರಿಶೀಲಿಸಿ ತಿದ್ದುಪಡಿ ಮಾಡಿ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ಸಭೆಯು ತೀರ್ಮಾನಿಸಿತು.

**೧೮೦.೧೯. ಕ್ರೋಢೀಕೃತ, ದಿನಗೂಲಿ ಸಿಬ್ಬಂದಿಗಳ ವೇತನ ಕುರಿತು.**

**ನಿರ್ಣಯ:** ಅಗತ್ಯ ಸೇವೆಗಾಗಿ ನಿಯೋಜಿಸಿಕೊಂಡಿರುವ ಪಟ್ಟಿ-೧ ರಲ್ಲಿನ ೬೩ ಜನ ತಾತ್ಕಾಲಿಕ ಆಧಾರಿತ (ಕ್ರೂಢೀಕೃತ) ಸಿಬ್ಬಂದಿಗಳ ಎಲ್ಲಾ ವಿವರಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಸಲ್ಲಿಸಲು ಹಾಗೂ ಇವರ ಸೇವೆ ಮತ್ತು ಇವರಿಗೆ ನೀಡುವ ವೇತನ ಕುರಿತು ಸಲಹೆ ಸೂಚನೆಗಳನ್ನು ಇಲಾಖೆಯಿಂದ ಪಡೆದು ಕ್ರಮವಹಿಸಲು ಸಭೆಯು ಸೂಚಿಸಿತು.

ಪಟ್ಟಿ-೨ ರಲ್ಲಿನ ೨೦ ಜನ, ಪಟ್ಟಿ-೩ ರಲ್ಲಿನ ೫ ಜನ, ಪಟ್ಟಿ-೪ ರಲ್ಲಿನ ೧೦ ಜನ ಹಾಗೂ ಪಟ್ಟಿ-೫ರಲ್ಲಿನ ಈಗಾಗಲೇ ಕೆಲಸ ನಿರ್ವಹಿಸುತ್ತಿರುವ ೨ ಜನ ನಿವೃತ್ತಿ ಸಿಬ್ಬಂದಿಗಳನ್ನು ಕನಿಷ್ಟ ವೇತನ ಹಾಗೂ ಗೌರವ ಸಂಭಾವನೆ ಆಧಾರದ ಮೇಲೆ ಆರು ತಿಂಗಳ ಅವಧಿಗೆ ನಿಯೋಜಿಸಿಕೊಳ್ಳಲು ಸಭೆಯು ಅನುಮತಿ ನೀಡಿತು.

**೧೮೦.೨೦. ಕನ್ನಡ ವಿಶ್ವವಿದ್ಯಾಲಯಕ್ಕೆ ರಕ್ಷಣಾ ಸಿಬ್ಬಂದಿ ಟೆಂಡರ್ ಹಾಗೂ ಕಸಗುಡಿಸುವ ಟೆಂಡರ್‌ನ ಪ್ರಕ್ರಿಯೆಗೆ ಕಾರ್ಯಕಾರಿ ಸಮಿತಿ ಘಟನೋತ್ತರ ಅನುಮೋದನೆ ಕೋರಿದೆ.**

**ನಿರ್ಣಯ:** ಅನುಮೋದಿಸಿದೆ.

**೧೮೦.೨೧. ಬೆಂಗಳೂರು ಕಚೇರಿ, ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರ ಹೊರ ಪ್ರಯಾಣಗಳಿಗೆ ವಾಹನ ಚಾಲಕರ ನಿಯೋಜನೆ ಕುರಿತು.**

**ನಿರ್ಣಯ:** ಈ ವಿಷಯ ಕುರಿತು ಕಾರ್ಯಕಾರಿ ಸಮಿತಿ ಸುಧೀರ್ಘವಾಗಿ ಚರ್ಚೆ ನಡೆಸಿತು. ಸಹಾಯಕ ಕುಲಸಚಿವರು (ನಿ) ಇವರು ಸಲ್ಲಿಸಿದ ಚಾಲಕರ ನಿರ್ವಹಣೆಯ ಮಾಹಿತಿಯನ್ನು ಪರಿಶೀಲಿಸಿತು. ಕನ್ನಡ ವಿಶ್ವವಿದ್ಯಾಲಯದಲ್ಲಿ ೬ ಜನ ಖಾಯಂ ವಾಹನ ಚಾಲಕರಿದ್ದು ಅವರಲ್ಲಿ ೪ ಜನ ಇಪ್ಪತ್ತಕ್ಕೂ ಹೆಚ್ಚು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಅವರಲ್ಲಿ ಶ್ರೀ ಶಿವಾನಂದ ಅವರು ಮನವಿ ಸಲ್ಲಿಸಿ ದೈಹಿಕ ಸಮಸ್ಯೆಗೆ ಚಿಕಿತ್ಸೆ ಪಡೆಯುತ್ತಿರುವುದನ್ನು ಸಮಿತಿಯು ಪರಿಶೀಲಿಸಿತು. ಶ್ರೀ ಪುಟ್ಟಮಾದಯ್ಯ ಇವರ ಕಣ್ಣಿನ ಸಮಸ್ಯೆಯಿಂದಾಗಿ ಬಾರಿ ವಾಹನ ಚಾಲನೆ ಪರವಾನಿಗೆ ರದ್ದು ಪಡಿಸಿರುವುದನ್ನು ಹಾಗೂ ರಾತ್ರಿ ಚಾಲನೆಗೆ ಅಸಮರ್ಥರು ಎಂಬುದನ್ನು ಅವರು ಸಲ್ಲಿಸಿರುವ ದಾಖಲೆಗಳಿಂದ ದೃಢಪಟ್ಟಿರುವುದನ್ನು ಗಮನಿಸಿತು.

ಪ್ರಸಾರಾಂಗದಲ್ಲಿ ಎರಡು ಭಾರಿ ವಾಹನಗಳಿದ್ದು ಅದಕ್ಕೆ ಇಬ್ಬರು ಚಾಲಕರನ್ನು ನಿಯೋಜಿಸಲಾಗಿದೆ. ದೂರಶಿಕ್ಷಣ ಮತ್ತು ಅಧ್ಯಯನಾಂಗದ ಪರೀಕ್ಷೆ ಇತರೆ ತುರ್ತು ಕೆಲಸಗಳಿಗೆ ಇಬ್ಬರು ಚಾಲಕರನ್ನು ನಿಯೋಜಿಸಬೇಕಾಗಿದೆ. ಕುಲಪತಿಯವರು ಮತ್ತು ಕುಲಸಚಿವರ ವಾಹನಗಳಿಗೆ ಇಬ್ಬರನ್ನು ನಿಗದಿಪಡಿಸಿದ್ದು, ರಜೆ ಮತ್ತು ಇನ್ನಿತರೆ ಸಂದರ್ಭಗಳಲ್ಲಿ ಹೊರ ಮತ್ತು ದೂರ ಪ್ರಯಾಣಗಳ ಸಂದರ್ಭದಲ್ಲಿ ಪರ್ಯಾಯ ಚಾಲಕರಿಲ್ಲದೆ ಕಷ್ಟವಾಗುತ್ತಿರುವುದನ್ನು ಸಭೆ ಗಮನಿಸಿತು. ಮಾನ್ಯ ಕುಲಪತಿಯವರ ಮತ್ತು ಕುಲಸಚಿವರ ಆಡಳಿತಾತ್ಮಕವಾದ ಹೊರ, ದೂರ ಪ್ರಯಾಣಗಳಿಗೆ ಶಿಷ್ಟಾಚಾರದ ಸಂದರ್ಭಗಳಿಗೆ ಅಗತ್ಯವಾಗಿ ಇಬ್ಬರು ವಾಹನ ಚಾಲಕರು ಬೇಕಾಗಿದ್ದು ಈ ಕೆಲಸಗಳಿಗೆ ಈಗಾಗಲೇ ಕೆಲಸ ಕೋರಿ ಅರ್ಜಿ ಸಲ್ಲಿಸಿರುವ ಶ್ರೀ ಶೇಕ್‌ಫಿರೋಜ್ ಮತ್ತು ಶ್ರೀ ಬಿ. ಧರ್ಮೇಂದ್ರ ಇವರುಗಳ ಮನವಿ, ವಿದ್ಯಾರ್ಹತೆ ಮತ್ತು ಅನುಭವವನ್ನು ಸಮಿತಿಯು ಪರಿಶೀಲಿಸಿತು. ಸದ್ಯ ತುರ್ತು ಸಂದರ್ಭಗಳಿಂದಾಗಿ ನವೆಂಬರ್ ೨೦೧೫ರಿಂದ ಕಾರ್ಯನಿರ್ವಹಿಸುತ್ತಿರುವ ಶ್ರೀ ಶೇಕ್‌ಫಿರೋಜ್ ಇವರನ್ನು ನವೆಂಬರ್ ೦೧, ೨೦೧೫ರಿಂದ ಮತ್ತು ಶ್ರೀ ಬಿ. ಧರ್ಮೇಂದ್ರ ಇವರನ್ನು ಡಿಸೆಂಬರ್ ೦೧, ೨೦೧೬ರಿಂದ ಅನ್ವಯವಾಗುವಂತೆ ಮಾನ್ಯ ಕುಲಪತಿಗಳಿಗೆ ದತ್ತವಾಗಿರುವ ವಿಶೇಷ ಅಧಿಕಾರವನ್ನು ಬಳಸಿ ತಾತ್ಕಾಲಿಕ ೬ ತಿಂಗಳ ಆದೇಶದ ಆಧಾರದ ಮೇಲೆ ನಿಯಮಾನುಸಾರ ನಿಯೋಜಿಸಲು ಸಭೆ ಅನುಮೋದಿಸಿತು. ಇವರಿಗೆ ವಾಹನ ಚಾಲಕರ ಮೂಲವೇತನ ರೂ. ೧೨,೫೦೦/- ಗಳಲ್ಲಿ ರೂ. ೧೦/-ಗಳನ್ನು ಕಡಿತಗೊಳಿಸಿ ವೇತನ ಪಾವತಿಗೆ ಆದೇಶ ನೀಡಲು ಅನುಮತಿಸಿತು. ಇವರಲ್ಲಿ ಒಬ್ಬರನ್ನು ಬೆಂಗಳೂರು ಕಚೇರಿಗೆ ಮತ್ತೊಬ್ಬರನ್ನು ಕೇಂದ್ರ ಕಚೇರಿಗೆ ನಿಯೋಜಿಸಲು ಸಭೆ ಅನುಮೋದಿಸಿತು.

**೧೮೦.೨೨. ಶ್ರೀ ಓಬಯ್ಯ ತೋಟಮಾಲಿ ಇವರಿಗೆ ಪದನಾಮ ಬದಲಾವಣೆ ಮಾಡಿ ಜವಾನ ಹುದ್ದೆಗೆ ಆದೇಶ ನೀಡಿರುವುದಕ್ಕೆ ಕಾರ್ಯಕಾರಿ ಸಮಿತಿ ಘಟನೋತ್ತರ ಅನುಮೋದನೆ ಕೋರಿದೆ.**

**ನಿರ್ಣಯ:** ಅನುಮೋದಿಸಿದೆ.

**೧೮೦.೨೩. ಬಾದಾಮಿ ಕೇಂದ್ರದ ತಾತ್ಕಾಲಿಕ ಕನ್ನಡ, ಇಂಗ್ಲಿಷ್ ಅಧ್ಯಾಪಕ ಮತ್ತು ಕಂಪ್ಯೂಟರ್ ಅಧ್ಯಾಪಕರನ್ನು ನೇಮಿಸಲು ೨೦೧೫ರ ನಿಯಮಾನುಸಾರ ಕ್ರಮವಹಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.**

**ನಿರ್ಣಯ:** ಸರ್ಕಾರದ ನಿಯಮಾನುಸಾರ ಡಿಸೆಂಬರ್ ೨ನೇ ವಾರದೊಳಗಾಗಿ ತಾತ್ಕಾಲಿಕವಾಗಿ ಆರು ತಿಂಗಳ ಅವಧಿಗೆ ಬಾದಾಮಿ ಕೇಂದ್ರಕ್ಕೆ ಕನ್ನಡ, ಇಂಗ್ಲಿಷ್ ಅಧ್ಯಾಪಕ ಮತ್ತು ಕಂಪ್ಯೂಟರ್ ಅಧ್ಯಾಪಕರನ್ನು ತಾತ್ಕಾಲಿಕವಾಗಿ ನಿಯೋಜಿಸಿಕೊಳ್ಳಲು ತುರ್ತಾಗಿ ಕ್ರಮವಹಿಸುವಂತೆ ಬಾದಾಮಿ ಕೇಂದ್ರದ ಮುಖ್ಯಸ್ಥರಿಗೆ ಸೂಚಿಸಲು ಸಭೆಯು ಅನುಮತಿ ನೀಡಿತು.

**೧೮೦.೨೪. ಶ್ರೀ ಅಶೋಕಕುಮಾರ ರಾಠೋಡ, ಶೀಘ್ರಲಿಪಿಗಾರರು ಇವರ ರಾಜೀನಾಮೆ ಸಲ್ಲಿಸಿರುವ ಕುರಿತು.**

**ನಿರ್ಣಯ:** ಶ್ರೀ ಅಶೋಕಕುಮಾರ ರಾಠೋಡ, ಶೀಘ್ರಲಿಪಿಗಾರರು ಇವರು ಸಲ್ಲಿಸಿರುವ ರಾಜೀನಾಮೆಯನ್ನು ಸಭೆಯು ಪರಿಶೀಲಿಸಿ ಮೂಲ ದಾಖಲೆಗಳನ್ನು ಸಲ್ಲಿಸದೆ ಇವರು ರಾಜೀನಾಮೆ ಸಲ್ಲಿಸುವ ಪ್ರಕ್ರಿಯೆಯೇ ಇಲ್ಲವೆಂದು ಹಾಗೂ ಇತರ ನೇಮಕಾತಿಯು ಅಸಿಂಧು ಎಂದು ಪರಿಗಣಿಸಿ ಈ ಕುರಿತಂತೆ ಕ್ರಮಬದ್ಧವಾಗಿ ಅಭ್ಯರ್ಥಿಗೆ ಪತ್ರ ಬರೆದು ನಿಮ್ಮ ನೇಮಕಾತಿಯನ್ನು ಏಕೆ ರದ್ದುಪಡಿಸಬಾರದು ಎನ್ನುವ ಕುರಿತು ಪತ್ರವನ್ನು ಬರೆಯಲು ಸಭೆಯು ಸೂಚಿಸಿ ಈ ಕುರಿತಂತೆ ಮುಂದಿನ ಕ್ರಮಕೈಗೊಳ್ಳಲು ಉಪಕುಲಸಚಿವರು ಆಡಳಿತ ಇವರಿಗೆ ಸೂಚಿಸಲು ಸಭೆಯು ನಿರ್ಣಯಿಸಿತು.

**೧೮೦.೨೫. ಖರೀದಿ ಘಟಕ ಹಾಗೂ ಖರೀದಿ ಸಮಿತಿಯನ್ನು ಮರು ರೂಪಿಸುವ ಕುರಿತು ಮತ್ತು ದಿನಾಂಕ ೨೮.೦೭.೨೦೧೫ರಂದು ಕರೆಯಲಾದ ಇ-ಟೆಂಡರ್ ಕುರಿತು.**

**ನಿರ್ಣಯ:** ಕೇಂದ್ರೀಯ ಖರೀದಿ ಘಟಕ ರಚನೆಗೆ ಮಾನ್ಯ ಕುಲಪತಿಗಳ ವಿವೇಚನೆಗೆ ಒಪ್ಪಿಸಲಾಯಿತು. ಹಾಗೂ ದಿನಾಂಕ ೨೮.೦೭.೨೦೧೫ರಂದು ಕರೆಯಲಾದ ಇ-ಟೆಂಡರ್‌ನ್ನು ದಿನಾಂಕ ೧೬.೧೧.೨೦೧೫ರಂದು ರದ್ದುಗೊಳಿಸಿದ ಪ್ರಕ್ರಿಯೆಗೆ

ಹಾಗೂ ಹೊಸ ಬೇಡಿಕೆಗಳನ್ನು ಸೇರಿಸಿ ಮರು ಟೆಂಡರ್ ಕರೆಯಲು ಕ್ರಮವಹಿಸುವಂತೆ ಸಭೆಯು ಸೂಚಿಸಿ ಅನುಮೋದನೆ ನೀಡಿತು.

**೧೮೦.೨೬. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿಶೇಷ ಘಟಕದ ವಿದ್ಯಾರ್ಥಿಗಳ ಮಾಸಿಕ ಆರ್ಥಿಕ ನೆರವು ಕುರಿತು.**

**ನಿರ್ಣಯ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿಶೇಷ ಘಟಕದ ವಿದ್ಯಾರ್ಥಿಗಳ ಮಾಸಿಕ ಆರ್ಥಿಕ ನೆರವನ್ನು ಸದರಿ ಸಾಲಿನ ಎಸ್‌ಸಿಪಿ ಮತ್ತು ಟಿಎಸ್‌ಪಿ ಅನುದಾನ ಲಭ್ಯವಿರುವವರೆಗೆ ನಿಯಮಗಳನ್ನು ಅಳವಡಿಸಿ, ವಿದ್ಯಾರ್ಥಿಗಳಿಂದ ಮುಚ್ಚಳಿಕೆಯನ್ನು ಪಡೆದು ಜನವರಿ ೨೦೧೬ ರಿಂದ ಜಾರಿಗೆ ಬರುವಂತೆ ರೂ. ೬೦೦೦/– ದಿಂದ ರೂ. ೭೦೦೦/–ಗಳಿಗೆ ಹೆಚ್ಚಿಸಲು/ ಭರಿಸಲು ಸಭೆಯು ಅನುಮತಿ ನೀಡಿತು.

**೧೮೦.೨೭. ಎಂ.ಎ. ಪಿಎಚ್.ಡಿ. (ಕನ್ನಡ ಸಾಹಿತ್ಯ) ಸ್ನಾತಕೋತ್ತರ ಸಂಯೋಜಿತ ಪದವಿಯ ಹೊಸ ಪಠ್ಯಕ್ರಮಕ್ಕೆ ಕಾರ್ಯಕಾರಿ ಸಮಿತಿ ಅನುಮೋದನೆ ಕುರಿತು.**

**ನಿರ್ಣಯ:** ಸಿಬಿಎಸ್‌ಸಿ ಅಳವಡಿಸಿಕೊಂಡು ಪಠ್ಯಕ್ರಮವನ್ನು ಸಿದ್ಧಪಡಿಸಲು ಸಭೆಯು ಅನುಮತಿ ನೀಡಿತು.

**೧೮೦.೨೮. ಶ್ರೀಮತಿ ಚಿತ್ರಕಲಾ ಹರಿಶ್ಚಂದ್ರ ದಿಗ್ಸಂಗಿಕರ್, ಕಿರಿಯ ಸಹಾಯಕರು ಇವರ ಪ್ರತಿನಿಯೋಜನೆ/ವರ್ಗಾವಣೆ ಕುರಿತು.**

**ನಿರ್ಣಯ:** ಶ್ರೀಮತಿ ಚಿತ್ರಕಲಾ ಹರಿಶ್ಚಂದ್ರ ದಿಗ್ಸಂಗಿಕರ್, ಕಿರಿಯ ಸಹಾಯಕಿ ಇವರ ಮನವಿಯನ್ನು ಪರಿಶೀಲಿಸಿದ ಸಮಿತಿಯು ಪ್ರತಿನಿಯೋಜನೆ ಮೇರೆಗೆ ಹೋಗುವುದಾದಲ್ಲಿ ಅನುಮತಿ ನೀಡಬಹುದೆಂದು ತೀರ್ಮಾನಿಸಿತು. ಹಾಗೂ ಈ ಕುರಿತಂತೆ ಸದರಿ ಸಿಬ್ಬಂದಿಯವರಿಗೆ ಪತ್ರ ಬರೆಯಲು ಸೂಚಿಸಿತು.

**೧೮೦.೨೯. ಶ್ರೀಮತಿ ಅನಿತಾ ಬೊಥೆಲ್ಲೋ, ಅಧೀಕ್ಷಕರು ಇವರು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕಚೇರಿಗೆ ಪ್ರತಿನಿಯೋಜನೆ ಕುರಿತು.**

**ನಿರ್ಣಯ:** ಶ್ರೀಮತಿ ಅನಿತಾ ಬೊಥೆಲ್ಲೋ, ಅಧೀಕ್ಷಕರು ಇವರ ಮನವಿಯನ್ನು ಪರಿಶೀಲಿಸಿದ ಸಮಿತಿಯು ಪ್ರತಿನಿಯೋಜನೆ ಮೇರೆಗೆ ಹೋಗುವುದಾದಲ್ಲಿ ಅನುಮತಿ ನೀಡಬಹುದೆಂದು ತೀರ್ಮಾನಿಸಿತು.

**೧೮೦.೩೦. ದಿನಾಂಕ ೧೯.೧೦.೨೦೧೫ರಂದು ಶ್ರೀ ಚಿತ್ತಪ್ಪ, ಸರ್ವರ್ ಇವರ ಆಂತರಿಕ ವರ್ಗಾವಣೆಯ ಕೋರಿಕೆ ಪತ್ರ ಕುರಿತು.**

**ನಿರ್ಣಯ:** ಸದರಿ ಮನವಿಯನ್ನು ಪರಿಶೀಲಿಸಿದ ಸಮಿತಿಯು ಸದರಿಯವರಿಗೆ ಎಚ್ಚರಿಕೆ ನೀಡಿ, ವರ್ಗಾವಣೆ ಮಾಡಬಹುದೆಂದು ಸಭೆಯು ಸೂಚಿಸಿತು.

**೧೮೦.೩೧. ಶ್ರೀ ಕೆ.ಎಂ. ಕುಬೇರಪ್ಪ, ಕಿರಿಯ ಅಭಿಯಂತರರು ಇವರ ಪ್ರತಿನಿಯೋಜನೆಯನ್ನು ಮುಂದಿನ ಐದು ವರ್ಷಗಳವರೆಗೆ ಮುಂದುವರಿಸುವ ಕುರಿತು ಇವರು ದಿನಾಂಕ ೧೯.೦೬.೨೦೧೫ರಂದು ನೀಡಿದ ಕೋರಿಕೆ ಪತ್ರ ಕುರಿತು.**

**ನಿರ್ಣಯ:** ಸದರಿಯವರ ಕೋರಿಕೆಯನ್ನು ಪರಿಶೀಲಿಸಿದ ಸಮಿತಿಯು ಎರಡು ವರ್ಷದ ಮಟ್ಟಿಗೆ ಪ್ರತಿನಿಯೋಜನೆಯನ್ನು ಮುಂದುವರೆಸಲು ಅನುಮೋದನೆ ನೀಡಿತು.

**೧೮೦.೩೨. ವಾಹನ ಚಾಲಕರು ಬಿಳಿ ಅಂಗಿ ಮತ್ತು ನೀಲಿ ಬಣ್ಣದ ಪ್ಯಾಂಟ್ ಸಮವಸ್ತ್ರ ಧರಿಸಲು ದಿನಾಂಕ ೨೯.೧೦.೨೦೧೫ರಂದು ನೀಡಿದ ಮನವಿ ಪತ್ರ ಕುರಿತು.**

**ನಿರ್ಣಯ:** ವಾಹನ ಚಾಲಕರುಗಳ ಕೋರಿಕೆಯನ್ನು ಪರಿಶೀಲಿಸಿ ನೀಲಿ ಅಥವಾ ಕಪ್ಪು ಬಣ್ಣದ ಪ್ಯಾಂಟ್ ಮತ್ತು ಬಿಳಿ ಬಣ್ಣದ ಅಂಗಿಯನ್ನು ಧರಿಸಲು ಹಾಗೂ ಶಿಷ್ಟಾಚಾರ ಸಂದರ್ಭದಲ್ಲಿ ಬಿಳಿ ಸಮವಸ್ತ್ರಗಳನ್ನೇ ಧರಿಸಬೇಕೆನ್ನುವ ಷರತ್ತಿಗೊಳಪಡಿಸಿ ಅನುಮೋದನೆ ನೀಡಿತು.

**೧೮೦.೩೩. ಸ್ನಾತಕೋತ್ತರ ವಿದ್ಯಾರ್ಥಿಗಳಿರುವ ಪದವಿ ಕಾಲೇಜುಗಳಲ್ಲಿನ ಅಧ್ಯಾಪಕರನ್ನು ನಿಯಮಾನುಸಾರ ಪಿಎಚ್.ಡಿ. ಮಾರ್ಗದರ್ಶಕರನ್ನಾಗಿಸುವ ಕುರಿತು.**

**ನಿರ್ಣಯ:** ಈ ಕುರಿತಂತೆ ಯುಜಿಸಿಗೆ ಪತ್ರವನ್ನು ಬರೆಯಲು ಹಾಗೂ ನಿಯಮಾನುಸಾರ ಕ್ರಮವಹಿಸಲು ಸೂಚಿಸಿತು.
**(೮ ಜನರನ್ನು ಮೀರದಂತೆ ಹಾಗೂ ನಿವೃತ್ತಿ ಅಧ್ಯಾಪಕರನ್ನು ನಿಯೋಜಿಸಲು ಹಾಗೂ ೩.೭೧ ಜೆ)**

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

**೧೮೦.೩೪. ಎಂ.ಆರ್.ಸಿ./ಎಂ.ಸಿ.ಸಿ.ಯಲ್ಲಿ ಕೆಲಸ ಮಾಡುತ್ತಿದ್ದ ಶ್ರೀ ಲಕ್ಷ್ಮೀಂದ್ರಸ್ವಾಮಿ ಇವರ ವೇತನ ಕುರಿತು.**

**ನಿರ್ಣಯ:** ವಿಭಾಗದ ಕೋರಿಕೆಯನ್ನು ಪರಿಗಣಿಸಿದ ಸಭೆಯು ಕನಿಷ್ಟ ವೇತನದ ಆಧಾರದ ಮೇಲೆ ಆರು ತಿಂಗಳ ಅವಧಿಯ ಆಧಾರದಲ್ಲಿ ನಿಯೋಜಿಸಿಕೊಳ್ಳಲು ಸಭೆಯು ಅನುಮೋದನೆ ನೀಡಿತು.

**೧೮೦.೩೫. ದೃಶ್ಯಕಲಾ ವಿಭಾಗಕ್ಕೆ ಅಧ್ಯಾಪಕರ ನಿಯೋಜನೆ ಕುರಿತು.**

ನಿರ್ಣಯ: ಈ ಹಿಂದೆ ಕಾರ್ಯನಿರ್ವಹಿಸುತ್ತಿರುವ ಡಾ. ಮೋಹನ ಪಾಂಚಾಳ್ ಇವರ ಮನವಿಯನ್ನು ಪರಿಗಣಿಸಿ, ಮುಖ್ಯಸ್ಥರಿಂದ ವಿಭಾಗದ ಅಧ್ಯಾಪಕರ ಕಾರ್ಯಭಾರವನ್ನು ಪಡೆದು, ಕಾರ್ಯನಿರ್ವಹಣಾ ವರದಿಯನ್ನು ಆಧರಿಸಿ ಆರು ತಿಂಗಳ ಅವಧಿಗೆ ನಿಯೋಜಿಸಲು ಹಾಗೂ ಮಾಸಿಕ ವೇತನ ರೂ. ೧೭,೫೦೦/–ಗಳ ಬದಲಾಗಿ ರೂ.೨೦,೦೦೦/–ಗಳನ್ನು ನೀಡಲು ಸಭೆಯು ಅನುಮತಿ ನೀಡಿತು.

**೧೮೦.೩೬. ಅಧ್ಯಕ್ಷರು, ಹಾಲುಮತ ಹಕ್ಕಬುಕ್ಕ ಸಂಸ್ಕೃತಿ ಪ್ರತಿಷ್ಠಾನ (ರಿ) ಇವರು ಡಾ.ಎಸ್.ಸಿ. ಪಾಟೀಲ್ ಇವರ ಮೇಲೆ ನೀಡಿದ ದೂರಿನ ಪತ್ರ ಕುರಿತು.**

ನಿರ್ಣಯ: ಸದರಿ ವಿಷಯವನ್ನು ಪರಿಶೀಲಿಸಿದ ಸಮಿತಿಯು ತಿದ್ದುಪಡಿ ಕುರಿತಂತೆ ಪ್ರತಿಷ್ಠಾನಕ್ಕೆ ಪತ್ರ ಬರೆಯಲು ಸಮಿತಿಯು ತೀರ್ಮಾನಿಸಿತು.

**೧೮೦.೩೭. ಸಂಚಾಲಕರು, ಮ್ಯಾಸನಾಯಕ (ವಾಲ್ಮೀಕಿ–ನಾಯಕ) ಬುಡಕಟ್ಟು ವೇದಿಕೆ ಇವರು ಡಾ. ಮಂಜುನಾಥ ಬೇವಿನಕಟ್ಟಿ ಇವರ ಮೇಲೆ ನೀಡಿದ ದೂರಿನ ಪತ್ರ ಕುರಿತು.**

ನಿರ್ಣಯ: ಪ್ರಸಾರಾಂಗದಿಂದ ಪ್ರಕಟಗೊಂಡ ಈ ಎಲ್ಲಾ ಪುಸ್ತಕಗಳು ಮುಗಿದಿರುವ ಹಿನ್ನೆಲೆಯಲ್ಲಿ ಡಾ. ಮಂಜುನಾಥ ಬೇವಿನಕಟ್ಟಿ, ಪ್ರಾಧ್ಯಾಪಕರು ಇವರ ಪತ್ರವನ್ನು ಹಿನ್ನೆಲೆಯಾಗಿಟ್ಟುಕೊಂಡು ಮರುಮುದ್ರಣದ ಸಂದರ್ಭದಲ್ಲಿ ಸರಿಪಡಿಸಿ ಈ ರೀತಿಯಾಗದಂತೆ ಕ್ರಮವಹಿಸಲಾಗುವುದು ಎಂದು ಸಂಬಂಧಿಸಿದವರಿಗೆ ಪತ್ರ ಬರೆಯಲು ಸಭೆಯು ತೀರ್ಮಾನಿಸಿತು.

**೧೮೦.೩೮. ವಿಶ್ವವಿದ್ಯಾಲಯದ ಸಿಬ್ಬಂದಿಗಳು ಬ್ಯಾಂಕ್ ಸಾಲವನ್ನು ಮರುಪಾವತಿಸದಿರುವ ಕುರಿತು.**

ನಿರ್ಣಯ: ಸದರಿ ಅಂಶಗಳನ್ನು ಪರಿಶೀಲಿಸಿದ ಸಮಿತಿಯು ಯಾವುದೇ ಬ್ಯಾಂಕುಗಳಲ್ಲಿ ಸಾಲಗಳಿಲ್ಲ ಎಂಬ ಮಾಹಿತಿಯನ್ನು ಕೋರಿಕೆದಾರರಿಂದ ಪಡೆದು ನಂತರ ಅನುಮತಿ ಪತ್ರ ನೀಡಲು ಸಭೆಯು ಸೂಚಿಸಿತು.

ಡಾ.ಕೆ. ಪ್ರೇಮಕುಮಾರ್ ಇವರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕಮಲಾಪುರ ಶಾಖೆಯಲ್ಲಿ ಪಡೆದ ಸಾಲದ ಮೊತ್ತವನ್ನು ಈವರೆಗೆ ಪಾವತಿಸದೇ ಇರುವ ಹಿನ್ನೆಲೆಯಲ್ಲಿ ಇವರು ಕೋರಿರುವ ನಿವೃತ್ತಿ ವೇತನ ವಂತಿಕೆಯನ್ನು ತಡೆಹಿಡಿಯಲು ಸೂಚಿಸಿತು.

ಶ್ರೀ ಪಿ.ಎಸ್. ಕರುಣಾಕರ, ಪ್ರಥಮದರ್ಜೆ ಸಹಾಯಕ ಇವರ ಸಾಲದ ಕುರಿತು ಸದರಿಯವರಿಗೆ ಪತ್ರ ಬರೆಯಲು ಸಭೆಯು ಸೂಚಿಸಿತು.

**೧೮೦.೩೯. ವಿದ್ಯಾರಣ್ಯ ಶಾಲೆಗೆ ಅನುದಾನ ಕೋರಿ ಮನವಿ ಪತ್ರ ಕುರಿತು.**

ನಿರ್ಣಯ: ಪ್ರೋತ್ಸಾಹ ಧನ ರೂ. ೬೦,೦೦೦/–ಗಳನ್ನು ಈ ವರ್ಷದ ಮಟ್ಟಿಗೆ ಷರತ್ತಿಗೊಳಪಡಿಸಿ ನೀಡಲು ಸಭೆಯು ಅನುಮತಿ ನೀಡಿತು.

**೧೮೦.೪೦. ಶ್ರೀ ಶಿವಾನಂದ, ಹಿರಿಯ ವಾಹನ ಚಾಲಕರ ಮನವಿ ಹಾಗೂ ಶ್ರೀ ಪುಟ್ಟಮಾದಯ್ಯ ಇವರು ವಾಹನ ಚಾಲನೆ ಕುರಿತು ನೀಡಿರುವ ವಿವರಣೆ ಬಗ್ಗೆ.**

ನಿರ್ಣಯ: ಶ್ರೀ ಶಿವಾನಂದ, ವಾಹನ ಚಾಲಕ ಇವರ ಮನವಿಯನ್ನು ಪರಿಶೀಲಿಸಿದ ಸಭೆಯು ದೂರ ಪ್ರಯಾಣವನ್ನು ಹೊರತುಪಡಿಸಿ ಕೇಂದ್ರದಲ್ಲಿಯೇ ಕೆಲಸ ನಿರ್ವಹಿಸಲು ಸೂಚಿಸಿತು. ಹಾಗೂ ಶ್ರೀ ಪುಟ್ಟಮಾದಯ್ಯ, ವಾಹನ ಚಾಲಕ ಇವರು ಸಾರಿಗೆ ಇಲಾಖೆಯಿಂದ ಪಡೆದ ವಾಹನ ಪರವಾನಿಗೆ (ಲೈಸೆನ್ಸ್) ದಾಖಲೆಗಳನ್ನು ಪಡೆದು ಸಲ್ಲಿಸಲು ಸಮಿತಿಯು ಸೂಚಿಸಿತು.

**೧೮೦.೪೧. ಪ್ರಸಾರಾಂಗ ಪುಸ್ತಕಗಳ ಮುದ್ರಣದ ಇ–ಟೆಂಡರ್ (ಡಿಸೆಂಬರ್ ೦೪, ೨೦೧೫ರಂದು ಬಿಡುಗಡೆಗೊಳಿಸಲು ನಿರ್ಧರಿಸಿರುವ ಹಸ್ತಪ್ರತಿ ವ್ಯಾಸಂಗ, ಸಂಪುಟ–೧೪, ಪುಸ್ತಕ ಮುದ್ರಣ) ಬಗ್ಗೆ.**

ನಿರ್ಣಯ: ಪ್ರಸಾರಾಂಗದ ಪುಸ್ತಕಗಳ ಮುದ್ರಣ ಕುರಿತಂತೆ ಪ್ರಸ್ತುತ ಜಾರಿಯಲ್ಲಿರುವ ಇ–ಟೆಂಡರ್ ದರದಲ್ಲಿಯೇ ಹಸ್ತಪ್ರತಿ ವ್ಯಾಸಂಗ ಸಂಪುಟ–೧೪ ಪುಸ್ತಕಗಳನ್ನು ಮುದ್ರಿಸಲು ಸಭೆಯು ಅನುಮತಿ ನೀಡಿತು.

**೧೮೦.೪೨. ಕಾಮಗಾರಿಗಳಿಂದ ನಷ್ಟವಾಗಿರುವ ಮೊತ್ತವನ್ನು ವೇತನದಿಂದ ಕಡಿತಗೊಳಿಸದಿರುವ ಬಗ್ಗೆ ಶ್ರೀ ನಂಜಯ್ಯನವರ್, ಮುಖ್ಯಸ್ಥರು ಶ್ರೀ ಚಂದ್ರಶೇಖರಪ್ಪ, ಸಹಾಯಕ ಅಭಿಯಂತರರು ಹಾಗೂ ಶ್ರೀ ಕೆ.ಎಂ. ಕುಬೇರಪ್ಪ, ಕಿರಿಯ ಅಭಿಯಂತರರು, ತಾಂತ್ರಿಕ ವಿಭಾಗ ಇವರುಗಳು ಕೋರಿರುವ ಮನವಿ ಪತ್ರ ಕುರಿತು.**

ನಿರ್ಣಯ: ಈ ಕುರಿತಂತೆ ಪಿ.ಡಬ್ಲ್ಯೂ.ಡಿ. ಜಿಲ್ಲಾ ಮುಖ್ಯ ಇಂಜಿನಿಯರ್ ಇವರ ಅಧ್ಯಕ್ಷತೆಯಲ್ಲಿ ಮತ್ತು ಜಿಲ್ಲಾ ಕಾನೂನು ಸಲಹೆಗಾರರನ್ನು ಒಳಗೊಂಡಂತೆ, ಕುಲಸಚಿವರ ಸಂಚಾಲಕತ್ವದಲ್ಲಿ ವಿಚಾರಣಾ ಸಮಿತಿಯನ್ನು ರಚಿಸಲು ಸಮಿತಿಯು ಸೂಚಿಸಿತು. ಹಾಗೂ ಈ ಕುರಿತಂತೆ ಮೂರು ತಿಂಗಳು ಒಳಗಾಗಿ ವರದಿಯನ್ನು ಪಡೆಯಲು ಮತ್ತು ಅಲ್ಲಿಯವರೆಗೆ ಸದರಿಯವರ ವೇತನವನ್ನು ಪಾವತಿಸಲು ಸಮಿತಿಯು ಅನುಮತಿ ನೀಡಿತು.

**೧೮೦.೪೩. ಕನ್ನಡ ವಿಶ್ವವಿದ್ಯಾಲಯದಲ್ಲಿ ೨೦೧೪–೧೫ನೇ ಸಾಲಿನಲ್ಲಿ ಉಳಿದ ಎಸ್.ಸಿ.ಪಿ/ಟಿ.ಎಸ್.ಪಿ. ಅನುದಾನವನ್ನು ಬಳಕೆಮಾಡಲು ಸರ್ಕಾರವು ಅನುಮೋದನೆ ನೀಡಿರುವ ಕುರಿತು.**

ನಿರ್ಣಯ: ಅನುದಾನಕ್ಕೆ ಅನುಮೋದಿಸಿದೆ.

**೧೮೦.೪೪. ಮಾನ್ಯ ಕುಲಪತಿಗಳ ಮನೆಗೆ ಅಡಿಗೆ ಮಾಡುವವರನ್ನು ನೇಮಿಸುವ ಕುರಿತು.**

**ನಿರ್ಣಯ:** ಕನಿಷ್ಟ ವೇತನದ ಆಧಾರದ ಮೇಲೆ ಆರು ತಿಂಗಳ ಅವಧಿಗೆ ನಿಯೋಜಿಸಿಕೊಳ್ಳಲು ಸಭೆಯು ಅನುಮೋದನೆ ನೀಡಿತು.

**೧೮೦.೪೫. ಮಾನ್ಯ ಕುಲಪತಿಗಳ ಗೃಹಕಚೇರಿ ಔಪಚಾರಿಕ ವೆಚ್ಚದ ಪರಿಷ್ಕರಣೆ ಕುರಿತು.**

**ನಿರ್ಣಯ:** ಮಾನ್ಯ ಕುಲಪತಿಗಳ ಗೃಹಕಚೇರಿ ಔಪಚಾರಿಕ ವೆಚ್ಚದ ಮೊತ್ತವನ್ನು ಡಿಸೆಂಬರ್ ೨೦೧೫ರಿಂದ ಅನ್ವಯವಾಗುವಂತೆ ರೂ.೮೦೦೦/–ಗಳಿಂದ ರೂ.೨೦,೦೦೦/–ಗಳಿಗೆ ಹೆಚ್ಚಿಸಲು ಸಭೆಯು ಅನುಮೋದನೆ ನೀಡಿತು.

**೧೮೦.೪೬. ಮಾನ್ಯ ಕುಲಪತಿಗಳ ಮತ್ತು ಮಾನ್ಯ ಕುಲಸಚಿವರ ಕಾರ್ಯಾಲಯಗಳ ನವೀಕರಣ ಕುರಿತು.**

**ನಿರ್ಣಯ:** ಸದರಿ ವಿಷಯನ್ನು ಪರಿಶೀಲಿಸಿದ ಸಮಿತಿಯು ಮಾನ್ಯ ಕುಲಪತಿಗಳ ಮತ್ತು ಕುಲಸಚಿವರ ಕಾರ್ಯಾಲಯಗಳ ನವೀಕರಣಕ್ಕೆ ಅನುಮತಿ ನೀಡಿತು.

**೧೮೦.೪೭. ಯುಜಿಸಿಯಿಂದ ಬರಬೇಕಾಗಿರುವ ವಿದ್ಯಾರ್ಥಿ ವೇತನವನ್ನು ನಿರೀಕ್ಷಿಸಿ ಅಭಿವೃದ್ಧಿ ಅನುದಾನ ಬಳಸಿ ವಿಶ್ವವಿದ್ಯಾಲಯದಿಂದಲೇ ಪಾವತಿಸುವ ಕುರಿತು.**

**ನಿರ್ಣಯ:** ಎರಡು ತಿಂಗಳ ಮಟ್ಟಿಗೆ ವಿದ್ಯಾರ್ಥಿ ವೇತನವನ್ನು ವಿಶ್ವವಿದ್ಯಾಲಯದ ಅನುದಾನದಿಂದ ನೀಡಲು ಸಭೆಯು ಅನುಮೋದಿಸಿತು.

**೧೮೦.೪೮. ಡಾ.ಎಂ. ಚಂದ್ರಪೂಜಾರಿ ಇವರ ಸೆಬಾಟಿಕಲ್ ರಜೆ ದಿನಾಂಕ ೦೧.೧೨.೨೦೧೫ರಿಂದ ಅನ್ವಯವಾಗುವಂತೆ ಹಾಗೂ ಹೊಸ ಪ್ರಸ್ತಾವಕ್ಕೆ ಅನುಮೋದನೆ ಕೋರಿ.**

**ನಿರ್ಣಯ:** ಸದರಿ ವಿಷಯವನ್ನು ಪರಿಶೀಲಿಸಿದ ಸಮಿತಿಯು ಡಾ.ಎಂ. ಚಂದ್ರಪೂಜಾರಿ, ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ವಿಭಾಗ ಇವರು ದಿನಾಂಕ ೦೧.೧೨.೨೦೧೫ರಿಂದ ಅನ್ವಯವಾಗುವಂತೆ ಒಂದು ವರ್ಷದ ಸೆಬಾಟಿಕಲ್ ರಜೆಯ ಮೇಲೆ ತೆರಳಲು ಸಭೆಯು ಅನುಮೋದಿಸಿತು. ಈ ಅವಧಿಯಲ್ಲಿ ಸದರಿಯವರ **ಜಾನಪದ ಸಂಶೋಧನೆ** ಎನ್ನುವ ಶೀರ್ಷಿಕೆಯ ಬದಲಾಗಿ ಅವರ ಕೋರಿಕೆಯಂತೆ **ಅಭಿವೃದ್ಧಿ ಸಿದ್ಧಾಂತಗಳು** ಎನ್ನುವ ಶೀರ್ಷಿಕೆಗೆ ಸಮಿತಿಯು ಅನುಮೋದನೆ ನೀಡಿತು.

**೧೮೦.೪೯. ಶ್ರೀ ಅಬ್ದುಲ್ ಹಕೀಂ ಅವರ ಪಿಎಚ್.ಡಿ. ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರ ಪತ್ರಕ್ಕೆ ಉತ್ತರಿಸುವ ಕುರಿತು.**

**ನಿರ್ಣಯ:** ಈ ಕುರಿತಂತೆ ಕಾನೂನು ಸಲಹೆಗಾರರು, ಬೇರೆ ವಿಶ್ವವಿದ್ಯಾಲಯದ ಒಬ್ಬ ಡೀನ್, ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವರು(ಪರೀಕ್ಷಾಂಗ) ಧಾರವಾಡ, ಯುಜಿಸಿ ಪ್ರಾದೇಶಿಕ ಕೇಂದ್ರದ ನಿರ್ದೇಶಕರು ಇವರುಗಳನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಲು ಸಭೆಯು ನಿರ್ಣಯಿಸಿತು.

**೧೮೦.೫೦. ಸಿ.ಸಿ.ಟಿವಿ ಮತ್ತು ಬಯೋಮ್ಯಾಟ್ರಿಕ್ ಯಂತ್ರಗಳ ನಿರ್ವಹಣೆ ಕುರಿತು.**

**ನಿರ್ಣಯ:** ಸಿಸಿಟಿಟಿ ಮತ್ತು ಬಯೋಮ್ಯಾಟ್ರಿಕ್ ಯಂತ್ರಗಳ ನಿರ್ವಹಣೆ ಕುರಿತಂತೆ ಹಿಂದಿನ ಕುಲಸಚಿವರಾಗಿದ್ದ ಡಾ. ವಿಜಯ್ ಪೂಣಚ್ಚ ತಂಬಂಡ ಇವರಿಗೆ ಪತ್ರವನ್ನು ಬರೆದು ಇದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಪಡೆದು ನಂತರ ಸದರಿ ಯಂತ್ರಗಳ ನಿರ್ವಹಣೆಗೆ ಕ್ರಮವಹಿಸಲು ಸಭೆಯು ತೀರ್ಮಾನಿಸಿತು. ಮತ್ತು ಐಮೆಟ್ರಿಕ್ ಹಾಕಿಸುವ ಬಗ್ಗೆ ಕ್ರಮವಹಿಸಲು ಸಮಿತಿಯು ನಿರ್ಣಯಿಸಿತು.

**೧೮೦.೫೧. ವಿಶ್ವವಿದ್ಯಾಲಯ ಆವರಣದ ಗ್ರಂಥಾಲಯ, ಬಸ್‌ನಿಲ್ದಾಣ ಮತ್ತು ಇತರೆ ಕಡೆಗಳಲ್ಲಿ ಶೌಚಾಲಯಗಳ ನಿರ್ಮಿಸುವ ಕುರಿತು.**

**ನಿರ್ಣಯ:** ಸದರಿ ವಿಷಯವನ್ನು ಪರಿಶೀಲಿಸಿದ ಸಮಿತಿಯು ವಿಶ್ವವಿದ್ಯಾಲಯ ಆವರಣದ ಗ್ರಂಥಾಲಯ, ಬಸ್‌ನಿಲ್ದಾಣ ಮತ್ತು ಇತರೆ ಕಡೆಗಳಲ್ಲಿ ಶೌಚಾಲಯಗಳ ನಿರ್ಮಿಸಲು ಅನುಮತಿ ನೀಡಿತು.

**೧೮೦.೫೨. ಕ್ಯಾಂಟೀನ್ ಪಕ್ಕದಲ್ಲಿರುವ ಬಸ್‌ನಿಲ್ದಾಣದ ಕಟ್ಟಡವನ್ನು ಪುಸ್ತಕ ಮಾರಾಟ ಮಳಿಗೆಯಾಗಿ ಬಳಸುವ ಕುರಿತು.**

**ನಿರ್ಣಯ:** ಸದರಿ ವಿಷಯವನ್ನು ಪರಿಶೀಲಿಸಿದ ಸಮಿತಿಯು ನಿಯಮಾನುಸಾರ ಮಾಸಿಕ ಬಾಡಿಗೆ ಆಧಾರದ ಮೇಲೆ ಆರು ತಿಂಗಳ ಅವಧಿಯವರೆಗೆ ಶ್ರೀ ತುಬಾಕಿ ಇವರಿಗೆ ಸದರಿ ಕಟ್ಟಡವನ್ನು ಪುಸ್ತಕ ಮಾರಾಟಗಳಿಗಾಗಿ ನೀಡಲು ಸಮಿತಿಯು ನಿರ್ಧರಿಸಿತು.

೧೮೦.೫೩. ಡೀನ್, ಭಾಷಾ ನಿಕಾಯ ಇವರು ವಿಶ್ವವಿದ್ಯಾಲಯದ ಸಿಬ್ಬಂದಿಗಳಾದ ಜಾಫರ್ ಅಲಿ, ಹನುಮೇಶ ಪತ್ತಾರ, ಪ್ರಹ್ಲಾದಾಚಾರ್ ಹಾಗೂ ಅಜಿತ್ ಹಡಪದ ಇವರುಗಳು ಬಾಕಿ ವೇತನವನ್ನು ನೀಡುವಂತೆ ಕೋರಿರುವ ಮಾಹಿತಿಯನ್ನು ಸಭೆಯ ಗಮನಕ್ಕೆ ತಂದರು. ಸದರಿ ವಿಷಯವನ್ನು ಪರಿಶೀಲಿಸಿದ ಸಭೆಯು ಈ ಕುರಿತಂತೆ ಪರಿಶೀಲಿಸಿ ವಿವರಗಳನ್ನು ಮಂಡಿಸಲು ಸಮಿತಿಯು ನಿರ್ಣಯಿಸಿತು.

೧೮೦.೫೪. ಬುಡಕಟ್ಟು ಅಧ್ಯಯನ ವಿಭಾಗದ ಐದು ವರ್ಷಗಳ ಯೋಜನೆಯಾದ ಯುಜಿಸಿ, ಎಸ್‌ಎಪಿ, ಡಿಆರ್‌ಎಸ್ ಯೋಜನೆಯ ನಿರ್ದೇಶಕರು ಆಯ್ಕೆ ಮಾಡಿರುವ ಪಟ್ಟಿಯನ್ನು ಪರಿಶೀಲಿಸಿ ತಾತ್ಕಾಲಿಕ ಹುದ್ದೆಗಳ ನೇಮಕಾತಿಗೆ ಅನುಮತಿ ನೀಡಿತು.

೧೮೦.೫೫. ಅಂಗವಿಕಲ ವಿದ್ಯಾರ್ಥಿಗಳಿಗೆ ವಾಹನಗಳನ್ನು ಹಾಗೂ ಅಂಧ ವಿದ್ಯಾರ್ಥಿಗಳಿಗೆ ಬ್ರೈಲ್ ಲ್ಯಾಪ್‌ಟಾಪ್‌ಗಳನ್ನು ಒದಗಿಸಲು ಸಭೆಯು ಅನುಮತಿ ನೀಡಿತು.

೧೮೦.೫೬. ಅಂಧ ವಿದ್ಯಾರ್ಥಿಗಳಿಗೆ ಬ್ರೈಲ್ ಲಿಪಿ ಪುಸ್ತಕಗಳನ್ನು ಖರೀದಿಸಿ ಒದಗಿಸಲು ಕ್ರಮವಹಿಸುವಂತೆ ಸೂಚಿಸಿತು.

೧೮೦.೫೭. ಶ್ರೀಮತಿ ಬಿ. ಜಯಶ್ರೀ, ಸಂಸತ್ ಸದಸ್ಯರು, (ರಾಜ್ಯಸಭೆ) ಇವರ ಕ್ಷೇತ್ರಾಭಿವೃದ್ಧಿ ನಿಧಿ ಅಡಿಯಲ್ಲಿ ಕನ್ನಡ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ಪರೀಕ್ಷಾ ಭವನವನ್ನು ನಿರ್ಮಿಸಲು ರೂ. ೧೦.೦೦ ಲಕ್ಷ ಗಳನ್ನು ಮಂಜೂರು ಮಾಡಿರುವುದನ್ನು ಸಭೆಯು ಪ್ರಶಂಸಿಸಿ ಈ ಕುರಿತಂತೆ ಕ್ರಮವಹಿಸಲು ಸಭೆಯು ನಿರ್ಣಯಿಸಿತು.

೧೮೦.೫೮. ಕನ್ನಡ ವಿಶ್ವವಿದ್ಯಾಲಯಕ್ಕೆ ೨೫ ವರ್ಷಗಳು ಪೂರ್ಣಗೊಳ್ಳುವ ಹಿನ್ನೆಲೆಯಲ್ಲಿ ಯುಜಿಸಿಗೆ ಅನುದಾನವನ್ನು ಕೋರಿ ಪತ್ರ ಬರೆಯಲು ಸಮಿತಿಯು ನಿರ್ಣಯಿಸಿತು.

೧೮೦.೫೯. ಶ್ರೀ ಪಿ.ಎಸ್. ಕರುಣಾಕರ ಇವರ ಅಮಾನತ್ತು ಕುರಿತು ಚಾರ್ಜ್‌ಶೀಟ್ ಮಾಡಲು, ನಿವೃತ್ತ ನ್ಯಾಯಾಧೀಶರಿಂದ ವಿಚಾರಣೆ ನಡೆಸಿ ಕಾರ್ಯಕಾರಿ ಸಮಿತಿಗೆ ಸಲ್ಲಿಸಲು ಹಾಗೂ ನ್ಯಾಯಾಧೀಶರಿಗೆ ಗೌರವ ಸಂಭಾವನೆ ನೀಡಲು ಸಮಿತಿಯು ಅನುಮೋದಿಸಿತು.

೧೮೦.೬೦. ಕನ್ನಡ ವಿಶ್ವವಿದ್ಯಾಲಯದ ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಕನ್ನಡ ವಿಶ್ವವಿದ್ಯಾಲಯದ ಅನುಮತಿ ಇಲ್ಲದೆ ಮಾಧ್ಯಮಗಳಿಗೆ ಮಾಹಿತಿಗಳನ್ನು ನೀಡಬಾರದೆಂದು ಸೂಚಿಸಿ ಪತ್ರವನ್ನು ಬರೆಯಲು ಸಭೆಯು ತೀರ್ಮಾನಿಸಿತು.

ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

| | |
|---|---|
| **ಕುಲಸಚಿವರು** | **ಕುಲಪತಿಗಳು** |
| **(ಪದನಿಮಿತ್ತ ಕಾರ್ಯದರ್ಶಿ)** | **(ಅಧ್ಯಕ್ಷರು)** |